# ಮಾನವತೆಯ ಕಡಲು

ತುತ್ತ ತುದಿಗೇರಿರುವ ಧರ್ಮಾಂಧತೆಯ ನಂಜು, ಹಿಂಸಾ ಪ್ರವೃತ್ತಿ, ಮೌಢ್ಯ, ಪ್ರಜಾಸತ್ತಾತ್ಮಕ ಮೌಲ್ಯಗಳ ಪತನ ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಬಗೆಗಿನ ಅಸೀಮ ನಿರ್ಲಕ್ಷ್ಯ ಇವೆಲ್ಲವೂ ಸಮಾಜವನ್ನು ದುಃಖಿತ ಸ್ಥಿತಿಗೆ ನೂಕಿವೆ. ಇಂತಹ ವಿಕೃತಿಗಳ ಆಳಕ್ಕಿಳಿದು ನೋಡಿದರೆ, ಧರ್ಮವನ್ನು ಅಧಿಕಾರಕ್ಕೇರುವ ಸೋಪಾನವನ್ನಾಗಿ ಮಾಡಿಕೊಳ್ಳುವ ಕುತ್ಸಿತ ಮನಸ್ಸು, ಧರ್ಮದ ತಿರುಳನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿಕೊಳ್ಳುವ ಸ್ವಾರ್ಥ ಪ್ರವೃತ್ತಿ ಹಾಗೂ ಅನ್ಯಧರ್ಮಗಳ ಬಗೆಗಿರುವ ದ್ವೇಷವೇ ಈ ಎಲ್ಲ ಅವಘಡಗಳು ಜರುಗುತ್ತಿವೆ ಎನ್ನುವುದನ್ನು ಜಗತ್ತು ಮನಗಂಡಿದೆ. ಲೋಕದ ಉನ್ನತ ಆದರ್ಶ ಪ್ರೀತಿ ಮತ್ತು ನಿಸ್ವಾರ್ಥವೇ ಹೊರತು ಸ್ವಾರ್ಥದ ಲಾಲಸೆಯಲ್ಲ! ಎಂಬುದನ್ನು ಸಮಾಜವನ್ನು ಒಡೆಯುತ್ತಿರುವ ವಿಕೃತ ಮನಸ್ಸುಗಳು ಮರೆತಿವೆ. ಮೂಲತಃ 'ಎಲ್ಲ ಧರ್ಮಗಳೂ ಮಾನವ ಸ್ವಭಾವದ ಅರಿವಿನ ತಳಹದಿಯ ಮೇಲೆ ಹುಟ್ಟುಪಡೆದಿವೆ'. ಆದ್ದರಿಂದಲೇ ಬೈಬಲ್ ಹೇಳುತ್ತದೆ 'ಧರ್ಮ ಎಂದರೆ; ಕಷ್ಟದಲ್ಲಿರುವ ತಬ್ಬಲಿಗಳಿಗೂ, ವಿಧವೆಯರಿಗೂ ರಕ್ಷಣೆ ಕೊಡುವುದು'. ಇಸ್ಲಾಂ ಧರ್ಮವು 'ಎಲ್ಲ ಮನುಷ್ಯರನ್ನು ಸಮಾನವಾಗಿ ಭ್ರಾತೃಭಾವದಿಂದ ಕಂಡುಕೊಳ್ಳುವುದು' ಎಂದು ಹೇಳುತ್ತದೆ.

ವಿವೇಕಾನಂದರು ಹೇಳಿದ ಒಂದು ದೃಷ್ಟಾಂತ ಕಥೆ ಹೀಗಿದೆ: 'ಒಬ್ಬ ರಾಜ ಬೇಟೆಯಾಡಲು ಒಮ್ಮೆ ಕಾಡಿಗೆ ಹೋದ. ಅಲ್ಲಿ ಋಷಿಯೊಬ್ಬ ಇವನಿಗೆ ಎದುರಾದ. ಅವನ ಮುಖದಲ್ಲಿ ಅಲೌಕಿಕದ ಕಾರುಣ್ಯದ ಜ್ಯೋತಿಯೊಂದು ಬೆಳಗುತ್ತಿತ್ತು. ತನ್ನ ಎದುರು ನಿಂತ ತೇಜೋಪುಂಜನಾದ ಋಷಿಯನ್ನು ನೋಡಿ ರಾಜ ಅವನಿಗೆ ನಮಿಸಿದ. ನನ್ನ ಅರಮನೆಗೆ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸಿ ಹಾಗೆಯೇ ನಾನು ನೀಡುವ ಕಾಣಿಕೆಯನ್ನೂ ಪಡೆದು ನನ್ನನ್ನು ಆಶೀರ್ವದಿಸಬೇಕೆಂದು ವಿನಂತಿಸಿಕೊಂಡ. ಋಷಿ ನಯವಾಗಿಯೇ ರಾಜನ ಆಹ್ವಾನವನ್ನು ತಿರಸ್ಕರಿಸಿದ. ಅಯ್ಯಾ ರಾಜ, ನಾನು ಸರ್ವಸಂಗ ಪರಿತ್ಯಾಗಿ. ನನಗೆ ನೀನು ನೀಡುವ ಆತಿಥ್ಯ, ಉಡುಗೊರೆಗಳ ಅವಶ್ಯಕತೆ ಇಲ್ಲ! ನೀನು ನೀಡುವುದಾದರೆ ಅವೆಲ್ಲವನ್ನೂ ನಿನ್ನ ರಾಜ್ಯದಲ್ಲಿರುವ ಬಡವರಿಗೆ ನೀಡು ಎಂದು ಹೇಳಿದ. ಆದರೂ ರಾಜ ಋಷಿಯನ್ನು ಅರಮನೆಗೆ ಬರಬೇಕೆಂದು ಒತ್ತಾಯಿಸಿದ. ನೀವು ಬರುವುದರಿಂದ ನನ್ನ ರಾಜ್ಯಕ್ಕೆ ಒಳಿತಾಗುತ್ತದೆ ಎಂದು ಪರಿ ಪರಿಯಾಗಿ ಬಿನ್ನವಿಸಿಕೊಂಡ. ಕೊನೆಗೆ ಋಷಿ ಅರಮನೆಗೆ ಬರಲು ಒಪ್ಪಿದ. ಅರಮನೆಗೆ ಬಂದ ಋಷಿಯನ್ನು ರಾಜ ಗೌರವಾದರಗಳಿಂದ ಬರಮಾಡಿಕೊಂಡ. ನನಗೆ ಪೂಜೆಯ ವೇಳೆಯಾಗಿದೆ, ಕೆಲವು ಹೊತ್ತಿನಲ್ಲೆ ಪೂಜೆ ಮುಗಿಸಿ ಬರುತ್ತೇನೆ. ಅಲ್ಲಿಯವರೆಗೂ ತಾವು ಇಲ್ಲಿಯೇ ವಿರಮಿಸಿಕೊಳ್ಳಿ ಎಂದು ರಾಜ ಪೂಜೆಗೆ ತೆರಳಿದ. ದೇವರ ಮುಂದೆ ರಾಜ ಕೈಮುಗಿದು ನಿಂತು ನನಗೆ ಎಲ್ಲರಿಗಿಂತಲೂ ಅಧಿಕವಾಗಿ ಧನ, ಕನಕ, ರಾಜ್ಯ, ಕೀರ್ತಿ, ಐಶ್ವರ್ಯಗಳನ್ನು ದಯಪಾಲಿಸು ಎಂದು ಬೇಡಿಕೊಂಡ. ಅದನ್ನು ನೋಡಿದ ಋಷಿ ಬೆಂಕಿ ತುಳಿದವನಂತೆ ಅರಮನೆಯಿಂದ ಓಡಿಹೋದ! ರಾಜ ಅವನ ಬೆನ್ನಟ್ಟಿ ಹೋಗಿ, 'ಸ್ವಾಮಿ ತಾವು ಏತಕ್ಕಾಗಿ ಅರಮನೆಯಿಂದ ಓಡಿಬಂದಿರಿ' ಎಂದು ಕೇಳಿದ. 'ಅಯ್ಯಾ ರಾಜ, ನೀನು ಭಿಕಾರಿಯಂತೆ ದೇವರ ಮುಂದೆ ನಿಂತು ರಾಜ್ಯ, ಐಶ್ವರ್ಯ, ಕೀರ್ತಿ ಮುಂತಾದುವುಗಳನ್ನು ಕೇಳಿಕೊಂಡೆಯಲ್ಲ! ನಾನು ತಿರುಕರಿಂದ ಏನನ್ನೂ ಬೇಡುವುದಿಲ್ಲ! ಅದಕ್ಕಾಗಿ ನಾನು ಓಡಿಬಂದೆ. ಅಯ್ಯಾ ರಾಜ, ಏನೂ ಇಲ್ಲದ ನೀನು ನನಗೇನು ಕೊಡಬಲ್ಲೆ' ಎಂದು ಹೇಳಿದ. ರಾಜ ತಲೆತಗ್ಗಿಸಿದ. ಆದ್ದರಿಂದ ಯಾವುದು ಸ್ವಾರ್ಥದಿಂದ ಕೂಡಿದೆಯೋ ಅದು ಅನೀತಿಯುತವಾದದ್ದು, ಯಾವುದು ನಿಸ್ವಾರ್ಥದಿಂದ ಕೂಡಿದೆಯೋ ಅದು ನೀತಿಯುತವಾದದ್ದು ಎಂದು ವಿವೇಕಾನಂದರು ಹೇಳಿದ್ದಾರೆ.

ಪರಮತ ನಿಂದೆ ಮತ್ತು ಪರಮತ ದ್ವೇಷವನ್ನೇ ತನ್ನ ನಿತ್ಯದ ಕಸುಬನ್ನಾಗಿ ಮಾಡಿಕೊಂಡಿರುವ ಸಮಾಜದ ಗುಂಪೊಂದರ ಸ್ಥಿತಿ ಇಂದು ಅಗ್ನಿಪರ್ವತದ ಮೇಲೆ ಕುಳಿತ ಗುಬ್ಬಚ್ಚಿ ಗೂಡಿನಂತಾಗಿದೆ. ನಿಜವಾದ ಅರ್ಥದಲ್ಲಿ 'ಪರ ಧರ್ಮಗಳನ್ನು; ಪರ ವಿಚಾರವನ್ನು ಗೌರವಿಸುವುದೇ ಮನುಷ್ಯನ ನಿಜವಾದ ಸಂಪತ್ತು' ಎನ್ನುವುದನ್ನು ಕನ್ನಡದ ಸಾಹಿತ್ಯ ಪರಂಪರೆಯ ವಿವೇಕ ತಿಳಿಸುತ್ತದೆ. ಈ ವಿವೇಕದ ಮೂಲಕ 'ವಿಕಸಿತವಾಗುವುದೇ ಬಾಳು' ಎಂಬುದು ವಿವೇಕಾನಂದರ ಮಾತು. ಯಾವ ದಿನ 'ಮ್ಲೇಚ್ಛ' ಎಂಬ ಶಬ್ದವನ್ನು ಭಾರತೀಯರು ಕಲಿತರೋ, ಆ ದಿನವೇ ಭಾರತೀಯರ ಅಧೋಗತಿಗೆ ಪೀಠಿಕೆಯೂ ಆಯಿತು ಎಂದು ಹೇಳಿದ ವಿವೇಕಾನಂದರು 'ಪರರನ್ನು ಪ್ರೇಮಿಸುವುದೇ ಧರ್ಮ; ದ್ವೇಷವೇ ಪಾಪ' ಎಂದು ಹೇಳಿದರು. ನಿಜವಾದ ಪ್ರೇಮಕ್ಕೆ ಕೋಪ, ದ್ವೇಷ ಮತ್ತು ತಿರಸ್ಕಾರಗಳಿರುವುದಿಲ್ಲ, ಪ್ರೇಮ ತಪ್ಪುಗಳನ್ನು ಕಂಡು ಸುಖಿಸುವುದಿಲ್ಲ, ಆದರೆ ಸತ್ಯಮಾರ್ಗದಲ್ಲಿ ನಡೆಯುವುದನ್ನು ಹರ್ಷಿಸುತ್ತದೆ. ಮಾನವತೆಯೆ ಎಲ್ಲ ಧರ್ಮಗಳ ಆತ್ಮದ ಬೆಳಕು ಎಂದು ವಿವೇಕಾನಂದರು ಹೇಳಿದರು.

'ಅಧೋಗತಿಗಿಳಿದಿರುವ ಭರತಖಂಡದ ಲಕ್ಷೋಪಲಕ್ಷ ಜೀವಿಗಳ ಮೇಲ್ಮೈಗಾಗಿ ನಾವೆಲ್ಲರೂ ಪ್ರಾರ್ಥಿಸೋಣ. ನಾನು ತತ್ವವೇತ್ತನಲ್ಲ; ಧರ್ಮಗುರುವಲ್ಲ; ಮಹರ್ಷಿಯಲ್ಲ; ದರಿದ್ರರಿಗಾಗಿ ಮರುಗುವ ನಾನೊಬ್ಬ ದರಿದ್ರ' ಎಂದು ತಮ್ಮನ್ನು ಕರೆದುಕೊಂಡ ವಿವೇಕಾನಂದರು ಸಮಾಜವನ್ನು ಜಾತಿ, ಮೌಢ್ಯಗಳಿಂದ ಒಡೆಯುತ್ತಿರುವ, ಶ್ರಮವಿಲ್ಲದೆ ಅನ್ಯರ ದುಡಿಮೆಯಿಂದ ಬದುಕುತ್ತಿರುವ ಕಪಟ ಸನ್ಯಾಸಿಗಳನ್ನು ಕುರಿತು ಕಟುವಾಗಿ ಹೇಳಿದರು. ನಿಜವಾದ ಯೋಗಿಗಳು ದರಿದ್ರರು, ನಿರ್ಗತಿಕರ ಸೇವೆಯನ್ನೇ ದೇವರ ಸೇವೆಯೆಂದು ತಿಳಿಯುತ್ತಾರೆ. 'ಬಡವರಿಗಾಗಿ ಎದೆ ಕರಗಿ ಮರುಗುವವನೆ ಮಹಾತ್ಮ' ಎಂದು ವಿವೇಕಾನಂದರು ಹೇಳಿದರು. 'ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಸನ್ಯಾಸಿಯ ಜನ್ಮ, ಹೆರವರಿಗಾಗಿ ಬಾಳನ್ನು ಬಾಳಬೇಕು. ನರಳುವ ಲಕ್ಷಾಂತರ ದುಃಖಿಗಳನ್ನು ಸಂತೈಸಬೇಕು. ಗೋಳಿಡುವ ಮಾತೆಯರ ಕಂಬನಿಗಳನ್ನು ತೊಡೆಯಬೇಕು' ಇದೇ ನಿಜವಾದ ಧರ್ಮಪಥ, ಸನ್ಯಾಸಿಗಳ ಬದುಕಿನ ಧ್ಯೇಯ. ಇದೇ ನಿಜವಾದ ಪ್ರಾರ್ಥನೆ ಎಂದು ವಿವೇಕಾನಂದರು ತಿಳಿದಿದ್ದರು. ಪ್ರಾರ್ಥನೆ ಹೃದಯ ಶುದ್ಧಿಯ ಉತ್ತಮ ಸಾಧನ. ಇಂತಹ ಚಿಂತನೆಯ ನೂರಾರು ನದಿಗಳು ಮಾನವತೆಯ ಕಡಲನ್ನು ಸೇರಿವೆ. ಆದ್ದರಿಂದಲೇ ಮಾನವ ಜಗತ್ತು ಇನ್ನೂ ಸಹ್ಯವಾಗಿದೆ.

'ವಿವೇಕಾನಂದರು ಸ್ವಾತಂತ್ರ್ಯ, ಸಮಾನತೆ ಮತ್ತು ಸಕಲರಿಗೂ ಸಮಾನಾವಕಾಶವಿದ್ದು, ಸಾಮಾನ್ಯ ಜನತೆಯ ಉದ್ಧಾರವಾಗಬೇಕೆಂದು ಸದಾ ಹೇಳುತ್ತಿದ್ದರು. ಒಮ್ಮೆ ಅವರನ್ನು ನೋಡಿದವರು, ಅವರನ್ನಾಗಲಿ, ಅವರ ಸಂದೇಶವನ್ನಾಗಲಿ ಮರೆಯಲಾರರು' ಎಂದು ಜವಹರಲಾಲ್ ನೆಹರೂ ವಿವೇಕಾನಂದರನ್ನು ಸ್ಮರಿಸುತ್ತಾರೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೊಳೆಯೇ ಕಾಣದ ಲೋಕವಿಲ್ಲ. ಕೊಳೆಯಿಲ್ಲದ ದೇಹವಿಲ್ಲ. ಬಂದ ಕೊಳೆಯನ್ನು ಆಗಾಗ ತೆಗೆದುಕೊಳ್ಳುವುದೇ ಚೊಕ್ಕತನದ ಲಕ್ಷಣ.

  —ಶಿವರಾಮ ಕಾರಂತ
- ಹಿಂದೆ ಸರಿವುದೇ ಸಾವು. ಆತ್ಮಹತ್ಯೆ!

  —ಕುವೆಂಪು
- ಭಕ್ತಿ, ಒಳ್ಳೆಯ ಮಾತುಗಳನ್ನಾಡಿಸಿದರೆ ಸಾಲದು. ಅದು, ಒಳ್ಳೆಯ ಕೆಲಸಗಳನ್ನೂ ಮಾಡಿಸಬೇಕು.

  —ಡಿವಿಜಿ
- ದೀನರು, ದುಃಖಿಗಳು ದೇವರಲ್ಲವೇ? ಮೊದಲು ಅವರನ್ನು ಪೂಜಿಸಬೇಕು.

  —ಸ್ವಾಮಿ ವಿವೇಕಾನಂದ
- ನಾವು ಯಾರು ಎಂಬುದು ನಮಗೆ ಗೊತ್ತು. ಆದರೆ ನಾವು ಏನಾಗಬಲ್ಲೆವು ಎಂಬುದು ಗೊತ್ತಿರುವುದಿಲ್ಲ.

  —ಷೇಕ್ಸ್‌ಪಿಯರ್
- ಯಾವ ಕನ್ನಡಿಗನ ಮನೆಯಲ್ಲಿ ಕೆಲವಾದರೂ ಕನ್ನಡ ಕೃತಿಗಳಿಲ್ಲವೋ, ಅದು ಕನ್ನಡಿಗನ ಮನೆಯೇ ಎಂದು ಪ್ರಶ್ನಿಸುವಂತಾಗಬೇಕು.

  —ಕಮಲಾ ಹಂಪನಾ